# ಅಶ್ವಿನೀಕುಮಾರ ದತ್ತ ಮತ್ತು ಸ್ವಾಮೀಜಿ

ಸಿ.ಎಸ್.ಶಾಸ್ತ್ರೀ

ಶ್ರೀರಾಮಕೃಷ್ಣರನ್ನು ಭೇಟಿಯಾಗಿದ್ದ ಅಶ್ವಿನೀಕುಮಾರ ದತ್ತ ಅವರು ಪ್ರಸಿದ್ಧ ಶೈಕ್ಷಣಿಕ ತಜ್ಞರೂ, ಸ್ವಾತಂತ್ರ್ಯ ಹೋರಾಟಗಾರರೂ, ಸಮಾಜ ಸುಧಾರಕರೂ, ಕರ್ಮಯೋಗಿಗಳೂ ಆಗಿದ್ದರು. ಅವರು ಸ್ವಾಮೀಜಿಯವರೊಂದಿಗೆ ಒಡನಾಡಿದ ವಿವರಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ. ಲೇಖಕರು ನಿವೃತ್ತ ಪ್ರಾಧ್ಯಾಪಕರು; ಪ್ರಸ್ತುತ ಮಂಗಳೂರಿನಲ್ಲಿ ನೆಲೆಸಿದ್ದಾರೆ.

'ಸ್ವಾಮಿ ವಿವೇಕಾನಂದ' ಎಂದೊಡನೆಯೇ ಸಾಮಾನ್ಯವಾಗಿ ಎಲ್ಲರೂ ತಿಳಿಯುವುದು ಆ ಮಹಾವ್ಯಕ್ತಿಯನ್ನೇ ಹೊರತಾಗಿ, ಅದಕ್ಕಿಂತ ಹೆಚ್ಚಿನದೇನಲ್ಲ. ಆದರೆ, 'ವಿವೇಕಾನಂದ' (೧೮೬೩-೧೯೦೨) ವ್ಯಕ್ತಿಗಿಂತಲೂ ಒಂದು ಶಕ್ತಿ, ಒಂದು ಸಂಸ್ಕೃತಿ, ಒಂದು ಸಿದ್ಧಾಂತ ಹಾಗೂ ಒಂದು ಲೋಕೋತ್ತರ ಪ್ರಪಂಚ (phenomenon) ಎಂದೇ ಪರಿಗಣಿಸಬೇಕಾಗಿದೆ. ನಮ್ಮ ಗ್ರಹಿಸುವ ಶಕ್ತಿಗೆ ತಕ್ಕಂತೆ ನಾವು ನಾವು ಸ್ವಾಮೀಜಿಯವರನ್ನು ತಿಳಿದುಕೊಳ್ಳುವಾಗ, 'ಇದು ಹೀಗೆಯೇ' ಎಂದು ತೀರ್ಮಾನಿಸಲು ಸಾಧ್ಯವಿಲ್ಲ. ನಮ್ಮ ಗ್ರಹಿಸುವಿಕೆ, ಅರ್ಥೈಸುವಿಕೆ, ಯೋಚನಾ ಪ್ರಪಂಚದ ಸೀಮಾಬಂಧನಕ್ಕೆ ಒಳಪಟ್ಟಿರುತ್ತದೆ. ಅವರ ಚಿಂತನೆಗಳನ್ನು, ಹಾಗೂ ಬೋಧನೆಗಳನ್ನು ಅಯಾಯ ಸಂದರ್ಭಕ್ಕೆ ತಕ್ಕಂತೆ ಅರ್ಥಮಾಡಿಕೊಳ್ಳಬೇಕಾಗಿದೆ. ಸ್ವಾಮೀಜಿಯವರನ್ನು ಆಧ್ಯಾತ್ಮಿಕ, ಧಾರ್ಮಿಕ, ಪ್ರಾಪಂಚಿಕ, ರಾಜಕೀಯ, ರಾಷ್ಟ್ರೀಯ... ಹೀಗೆ ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡಲು ಸಾಧ್ಯ ಮತ್ತು ಅವರ ವಿಚಾರಧಾರೆಯ ಅಧ್ಯಯನ ಸಂಪ್ರದಾಯೀ ಸಂಸ್ಕೃತಿಯ ಹೊಸ ಭಾಷ್ಯವನ್ನು ಪರಿಚಯಿಸುವುದಾಗಿದೆ. ಅದೇ ಸ್ವಾಮೀಜಿಯವರು ನೀಡಿರುವ ಚಿರನೂತನ ನಿರ್ದೇಶನ. ಪ್ರತಿಯೋರ್ವರಿಗೂ ಅವರವರ ಕಾರ್ಯಕ್ಷೇತ್ರಗಳಲ್ಲಿ ಚೈತನ್ಯಮಯ ಜೀವನ ಪಥದಲ್ಲಿ ಸಾಗಲು ಸ್ಫೂರ್ತಿಯ ಚಿಲುಮೆಯಾಗಿ ಸ್ವಾಮಿ ವಿವೇಕಾನಂದರು ಕಂಡುಬಂದರೆ ಆಶ್ಚರ್ಯವಿಲ್ಲ. ಸ್ವಾಮೀಜಿಯವರಿಂದ ಸ್ಫೂರ್ತಿ ಪಡೆದವರಲ್ಲಿ ಅನೇಕಾನೇಕ ಮಹನೀಯರು, ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸುಧಾರಕರು ಇರುವಂತೆಯೇ ಸಾವಿರಾರು ಸಾಮಾನ್ಯರೂ ಇದ್ದಾರೆ. ಅವರೆಲ್ಲರೂ ಚಿರಋಣಿಗಳಾಗಿ ಸ್ವಾಮೀಜಿಯವರನ್ನು ಪ್ರಶ್ನಾತೀತವಾಗಿ ಹಿಂಬಾಲಿಸುವವರಾಗಿದ್ದಾರೆ. ಅವರ ಬೋಧನೆಗಳನ್ನು ಕಾರ್ಯರೂಪಕ್ಕಿಳಿಸಿದವರಲ್ಲಿ ಬಂಗಾಳದ ಅಶ್ವಿನೀಕುಮಾರ್ ದತ್ತ (೧೮೫೬-೧೯೨೩) ಒಬ್ಬರಾಗಿದ್ದಾರೆ. ಈ ಲೇಖನದಲ್ಲಿ ಅವರ ಉದಾಹರಣೆಯನ್ನು ಮಾದರಿಯಾಗಿ ಕಾಣುವ ಪ್ರಯತ್ನವಿದೆ. ಲೆಫ್ಟಿನೆಂಟ್ ಕರ್ನಲ್ ಎನ್.ಸಿ. ಗುಹ ಅವರ ಅಧ್ಯಯನದ ಆಧಾರದಲ್ಲಿ ಸ್ವಾಮಿ ವಿವೇಕಾನಂದರು ನೀಡಿದ ಸ್ಫೂರ್ತಿಯ ಸದುಪಯೋಗದ ವಿವರಣೆ ಇಲ್ಲಿದೆ. *('Mahatma Ashwini Kumar Datta', Lt. Col. N.C.Guha, in 'Vedanta Kesari, Aug-2003)*



ಶ್ರೀ ಅಶ್ವಿನಿ ಕುಮಾರ್ ದತ್ತ ಅವರು ಈಗಿನ ಬಾಂಗ್ಲಾದೇಶದಲ್ಲಿ (ಬರಿಸಾಲ್) ೧೮೫೬ರ ಜನವರಿ ೨೫ರಂದು ಅನುಕೂಲಸ್ಥ ಕಾಯಸ್ಥ ಕುಟುಂಬವೊಂದರಲ್ಲಿ ಜನಿಸಿದ್ದರು. ಅವರ ತಂದೆ ಬ್ರಜಮೋಹನ್ ನ್ಯಾಯಾಧೀಶರಾಗಿದ್ದರು. ಎಳೆಯ ವಯಸ್ಸಿನಲ್ಲಿಯೇ ಅವರು ರಾಷ್ಟ್ರಾಭಿಮಾನ ಹಾಗೂ ಸಮಾಜಸೇವೆಯಲ್ಲಿ ಆಸಕ್ತಿ ತೋರಿಸಿದ್ದರು. ಮುಂದೆ, ಅವರು ಶ್ರೀರಾಮಕೃಷ್ಣ ಪರಮಹಂಸರ ಪ್ರಭಾವಕ್ಕೆ ಒಳಗಾಗಿ, ಆತ್ಮೋದ್ಧಾರ-ಸಮಾಜೋದ್ಧಾರದ ಸಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರು ಶ್ರೀರಾಮಕೃಷ್ಣರ ಆಣತಿಯಂತೆ ಅವರ ಶಿಷ್ಯ ನರೇಂದ್ರರನ್ನು (ಸ್ವಾಮಿ ವಿವೇಕಾನಂದ) ಒಮ್ಮೆ ಸಂಪರ್ಕಿಸಿದ್ದರು (೧೮೮೫). ಆದರೆ, ಕಾರಣಾಂತರಗಳಿಂದ ಆ ಭೇಟಿ ಫಲಪ್ರದವಾಗಿರಲಿಲ್ಲ. ಅಶ್ವಿನೀ ಕುಮಾರ್ ವಿದ್ಯಾಲಯವೊಂದನ್ನು ಸ್ಥಾಪಿಸಿ ಜ್ಞಾನಪ್ರಸರಣ ಕಾರ್ಯಕ್ಷೇತ್ರದಲ್ಲಿ ಮಗ್ನರಾಗಿದ್ದರು. (Brojo Mohan Institution at Barisal - 1884) ಅವರ ಆ ಮೇಲಿನ ಕಾರ್ಯಯೋಜನೆಗಳಿಗೆ, ಅವರು ಸ್ವಾಮಿ ವಿವೇಕಾನಂದರ

ಸಲಹೆ-ಮಾರ್ಗದರ್ಶನ ಪಡೆಯಬೇಕೆಂದಿದ್ದರು. ಆ ನಿಟ್ಟಿನಲ್ಲಿ ಸ್ವಾಮೀಜಿಯವರನ್ನು ಹೇಗಾದರೂ ಸಂಪರ್ಕಿಸಬೇಕೆಂಬ ಪ್ರಯತ್ನ ದಲ್ಲಿದ್ದರು.

## ಆಲ್ಮೋರಾದಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದರು ಭಾರತದ ಸಾಂಸ್ಕೃತಿಕ ಕೀರ್ತಿ ಪತಾಕೆಯನ್ನು ಪಾಶ್ಚಾತ್ಯದೇಶಗಳಲ್ಲಿ ಹಾರಿಸಿ 'ವಿಶ್ವಮಾನ್ಯ ಸ್ವಾಮೀಜಿ' ಆಗಿದ್ದರು. ಅವರಿಗೆ ಅನೇಕ ವಿದೇಶೀ ಶಿಷ್ಯರು ಹಾಗೂ ಅಭಿಮಾನಿಗಳಿದ್ದರು. ಸ್ವಾಮೀಜಿಯವರು ಅವರ ಕೆಲವು ವಿದೇಶೀ ಶಿಷ್ಯರನ್ನೂ ಮತ್ತು ಆಶ್ರಮದ ಸಹೋದರ ಸಂನ್ಯಾಸಿ ಗಳನ್ನೂ ಕರೆದುಕೊಂಡು ೧೮೯೮ರ ಮೇ ೧೧ರಂದು ಕಲ್ಕತ್ತಾ ದಿಂದ ನೈನಿತಾಲ್‌ಗೆ ಪ್ರಯಾಣ ಬೆಳೆಸಿದ್ದರು. ನೈನಿತಾಲ್‌ಗೆ ಮೇ ೧೩ರಂದು ತಲುಪಿದ ಅವರು, ೨-೩ ದಿವಸ ಅಲ್ಲಿದ್ದು, ಆಮೇಲೆ ಆಲ್ಮೋರಾಕ್ಕೆ ಹೋದರು (ಮೇ ೧೭). 'ಹಿಮಾಲಯ ಆಧ್ಯಾತ್ಮಿಕ ಸ್ಫೂರ್ತಿಯ ನೆಲೆ' ಎಂಬುದಾಗಿ ಸ್ವಾಮೀಜಿಯವರು ಅವರ ಶಿಷ್ಯರಿಗೆ ಹಿಮಾಲಯದ ಪ್ರಾಮುಖ್ಯವನ್ನು ತಿಳಿಸಿದರು. ಅವರ ವಿದೇಶೀ ಶಿಷ್ಯರು ಹಿಮಾಲಯದ ಬೆರಗಿಗೆ ಮೈಮರೆ ತರು! ಆಲ್ಮೋರಾದಲ್ಲಿ ಸ್ವಾಮೀಜಿಯವರ ಶಿಷ್ಯರೊಬ್ಬರು ಅವರೆಲ್ಲರಿಗೆ ಆಶ್ರಯ ನೀಡಿ ವ್ಯವಸ್ಥೆ ಮಾಡಿದ್ದರು.( Western disciple, Seviers) ಆ ಇಪ್ಪತ್ತೈದು ದಿನಗಳಲ್ಲಿ ಸ್ವಾಮೀಜಿ ಯವರು ಶಿಷ್ಯರಿಗೆ ಬೋಧನೆ-ತರಬೇತಿ ನೀಡಿದರಲ್ಲದೆ, ಪ್ರವ ಚನಗಳನ್ನೂ ಮಾಡಿ, ಆಧ್ಯಾತ್ಮಿಕ ಬದುಕಿಗೆ ಮಾರ್ಗದರ್ಶನ ಮಾಡಿದರು. ಅಲ್ಲಿ ಪ್ರತಿ ದಿನವೂ ಧ್ಯಾನ ಮತ್ತು ಸಾಧನಾ ಕೌಶಲ್ಯಗಳ ಸತ್‌ಪ್ರಯತ್ನ ನಡೆಯುವುದಾಗಿತ್ತು. ಸ್ವಾಮೀಜಿ ಶಿಷ್ಯೆ ನಿವೇದಿತಾ ಅವರೂ ಆ ಕಾರ್ಯಗಳಲ್ಲಿ ವಿಶೇಷ ಆಸಕ್ತಿ ಹೊಂದಿ ಆತ್ಮೋದ್ಧಾರಕ್ಕಾಗಿ ಪ್ರಯತ್ನಿಸುತ್ತಿದ್ದರು. ಆಮೇಲೆ, ಆಲ್ಮೋರಾದಲ್ಲಿ ಬ್ರಿಟಿಷ್ ಪೋಲೀಸರು ಅಲ್ಲಿಯ ಚಲನವಲನ ಗಳನ್ನು ಬಹಳವಾಗಿ ಗಮನಿಸುತ್ತಿದ್ದರು. ಆದರೆ, ಆ ಚಟುವಟಿಕೆ ಗಳು ನೇರವಾಗಿ ಬ್ರಿಟಿಷರ ವಿರುದ್ಧವಲ್ಲದ ಕಾರಣ ಸುಮ್ಮನಾಗಿ ದ್ದರು.

## ಅಶ್ವಿನೀಕುಮಾರ್ - ಸ್ವಾಮೀಜಿ ಭೇಟಿ

ಅಶ್ವಿನೀ ಕುಮಾರ್ ಅವರಿಗೆ ಸ್ವಾಮೀಜಿಯವರು ಆಲ್ಮೋರಾ ದಲ್ಲಿ ಇರುವ ವಿಷಯ ಪತ್ರಿಕೆಗಳಿಂದ ತಿಳಿದುಬಂತು. ಅದಾಗಿ, ಅವರು ಸ್ವಾಮೀಜಿಯವರ ಭೇಟಿಗಾಗಿ ೧೮೯೭ರ ಮೇ-ಜೂನ್ ನಲ್ಲಿ ಆಲ್ಮೋರಾಕ್ಕೆ ಹೋದರು. ಅಲ್ಲಿ, ಆಂಗ್ಲಭಾಷಾ ಪರಿಣತ ರಾಗಿ ಕುದುರೆ ಸವಾರಿ ಮಾಡುವ, ಆಕರ್ಷಕ ವ್ಯಕ್ತಿತ್ವದ ಬಂಗಾಳೀ ಸಾಧುವೊಬ್ಬರು ಇರುವ ವಿಷಯ ಅಶ್ವಿನೀ ಕುಮಾರ್ ಅವರಿಗೆ ತಿಳಿದುಬಂತು. ಅವರು ಸ್ವಾಮೀಜಿಯವರೇ ಇರಬೇಕೆಂಬುದಾಗಿ ಅಶ್ವಿನೀ ಕುಮಾರ್ ನಿರ್ಧರಿಸಿದರು. ಅವರ ಬಗ್ಗೆ ವಿಚಾರಿಸಿದಾಗ ದಾರಿಹೋಕನೊಬ್ಬ, 'ನೀವು ಯಾರ ಬಗ್ಗೆ ಕೇಳುತ್ತೀರಿ - ಆ ಕುದುರೆ ಸವಾರಿಯ ಸಾಧುವಿನ ಬಗ್ಗೆಯೆ?' ಎಂದು ಕೇಳಿದ ಮತ್ತು ಅವರು ತಂಗಿದ್ದ ಮನೆಯನ್ನೂ ತೋರಿಸಿದ. ಅಷ್ಟರಲ್ಲೇ, ಕಾವಿಬಟ್ಟೆ ಧರಿಸಿದ್ದ ಓರ್ವ ಸಾಧು ಕುದುರೆಯನ್ನೇರಿ ಆ ಮನೆಗೆ ಬಂದುದನ್ನೂ ಅಶ್ವಿನೀಕುಮಾರ್ ಗಮನಿಸಿದರು. ಸಾಧು ಕುದುರೆ ಯಿಂದ ಇಳಿದೊಡನೆಯೇ ಓರ್ವ ಆಂಗ್ಲೇಯ ಆ ಕುದುರೆ ಯನ್ನು ಲಾಯಕ್ಕೆ ಒಯ್ದ - ಸಾಧು ಆ ಮನೆಯೊಳಗೆ ಪ್ರವೇ ಶಿಸಿದ...

ಆ ವಠಾರದತ್ತ ನಡೆದ ಅಶ್ವಿನೀ ಕುಮಾರ್, ಅಲ್ಲಿಯೇ ಮುಂಭಾಗದಲ್ಲಿದ್ದ ತರುಣ ಸಂನ್ಯಾಸಿಯೊಬ್ಬನಲ್ಲಿ, ''ನರೇಂದ್ರ ದತ್ತ ಇಲ್ಲಿದ್ದಾರೆಯೇ'' ಎಂದು ಕೇಳಿದಾಗ, ''ಸ್ವಾಮಿ, ಅವರು ತೀರಿ ಹೋಗಿ ಕೆಲವು ವರ್ಷಗಳೇ ಆದವು - ಈಗೆಲ್ಲಿ ಅವರು'' ಎಂದು ಆಶ್ಚರ್ಯ ವ್ಯಕ್ತಪಡಿಸಿದ. ''ಛೇ, ಅವರು ಪ್ರಾಯದಲ್ಲಿ ನನಗಿಂತಲೂ ಚಿಕ್ಕವರು. ಅವರಲ್ಲ, ನಾನು ಶ್ರೀರಾಮಕೃಷ್ಣರ ಶಿಷ್ಯ ನರೇಂದ್ರರ ಬಗ್ಗೆ ವಿಚಾರಿಸುವುದು'' ಎಂದಾಗ, ''ಪರಮ ಹಂಸರ ಶಿಷ್ಯ ನರೇಂದ್ರ... ನರೇಂದ್ರ ದತ್ತ...ನರೇಂದ್ರ ನಾಥ...'' ಎನ್ನುತ್ತಾ ಹೆಚ್ಚೇನೂ ತಿಳಿಯದ ಆ ತರುಣ ಸಂನ್ಯಾಸಿ ತಡವರಿಸಿದ. ಅವರಿಬ್ಬರ ಬಗೆಹರಿಯದ ಆ ಮಾತುಕತೆಯನ್ನು ಕೇಳುತ್ತಾ ನೋಡುತ್ತಿದ್ದ ಸ್ವಾಮೀಜಿಯವರು, ಆ ಬಗ್ಗೆ ತಿಳಿದು ಬರುವಂತೆ ಬೇರೊಬ್ಬನನ್ನು ಕಳುಹಿಸಿ, ಅದೇನೆಂದು ವಿಚಾರಿಸಿ ದಾಗ, ಯಾರೋ ಒಬ್ಬರು ಶ್ರೀರಾಮಕೃಷ್ಣರ ನರೇಂದ್ರನ ಬಗ್ಗೆ ಕೇಳುತ್ತಿದ್ದಾರೆ ಎಂಬುದು ಸ್ವಾಮೀಜಿಯವರಿಗೆ ತಿಳಿದುಬಂತು. ''ಹಾ, ನೀನೇನು ಮಾಡಿದೆಯಪ್ಪಾ, ಅವರನ್ನು ಕರೆದು ತಾ'' ಎಂದು ಹೇಳಿ ಸ್ವಾಮೀಜಿಯವರು ಕಾತರದಿಂದ ಕಾದು ಕುಳಿತರು. ಹಾಗೆಯೇ, ಅಶ್ವಿನೀಕುಮಾರ್ ಒಳಗೆ ಪ್ರವೇಶಿಸಿದಾಗ, ಆರಾಮ ಕುರ್ಚಿಯಲ್ಲಿ ಕುಳಿತಿದ್ದ ಸ್ವಾಮೀಜಿಯವರು ಎದ್ದು ಬಂದು ಸ್ವಾಗತಿಸಿದರು.... 'ಸುಮಾರು ಹದಿನಾಲ್ಕು ವರ್ಷಗಳ ಹಿಂದೆ, ಶ್ರೀರಾಮಕೃಷ್ಣರ ಆಣತಿಯಂತೆ, ನರೇಂದ್ರರನ್ನು ಸಂದರ್ಶಿಸಿ ದಾಗ ಅವರೇನೂ ಹೆಚ್ಚು ಮಾತನಾಡಲಿಲ್ಲ' ಎಂದು ಅಶ್ವಿನೀ ಕುಮಾರ್ ಮನದಲ್ಲೇ ನೆನೆದುಕೊಂಡರು. ಅದನ್ನೇ ಸ್ವಾಮೀಜಿ ಯವರೂ ಯೋಚಿಸಿ, ''ಹಿಂದೊಮ್ಮೆ ನಾವು ಭೇಟಿಯಾದಾಗ ಕಾರಣಾಂತರಗಳಿಂದ ನನಗೆ ಹೆಚ್ಚೇನೂ ಮಾತನಾಡಲಾಗಲಿಲ್ಲ'' ಎಂದು ಬೇಸರ ವ್ಯಕ್ತಪಡಿಸಿದರು. 'ಇದು ಎಂತಹ ಸೌಜನ್ಯ' ಎಂದು ಅಶ್ವಿನೀಕುಮಾರ್ ಮನದಲ್ಲೇ ಚಿಂತಿಸಿದರು. ಮಾತನಾ ಡಲು ಪ್ರಾರಂಭಿಸುತ್ತಾ, 'ಸ್ವಾಮೀಜಿ' ಎಂದು ಸಂಬೋಧಿಸಿ ದಾಗ, ಸ್ವಾಮೀಜಿಯವರು, ''ನಾನು ಯಾವಾಗ ನಿಮಗೆ 'ಸ್ವಾಮೀಜಿ' ಯಾದದ್ದು ? ನಾನು ಈಗಲೂ ನಿಮ್ಮ ನರೇಂದ್ರನೇ. ನಮ್ಮ ಗುರುಗಳು ಕರೆಯುತ್ತಿದ್ದ ಆ ಹೆಸರೇ ನನಗೆ ಅತೀ ಇಷ್ಟ'' ಎಂದು ಆತ್ಮೀಯತೆಯನ್ನು ವ್ಯಕ್ತಪಡಿಸಿದರು. ''ನೀವು ಜಗತ್ತಿನ

ವಿವಿಧ ರಾಷ್ಟ್ರಗಳನ್ನು ಸಂಚರಿಸುತ್ತಾ ಸಾವಿರಾರು ಜನರ ಹೃದಯ ಗೆದ್ದಿರುವಿರಿ ಹಾಗೂ ಅವರನ್ನು ಆಧ್ಯಾತ್ಮಿಕ ಚಿಂತನಾಪಥದಲ್ಲಿ ನಡೆಸುವವರಾಗಿದ್ದೀರಿ. ಈಗ, ಭಾರತದ ಆತ್ಮೋದ್ಧಾರಕ್ಕೆ ದಾರಿ ಯಾವುದೆಂದು ತಿಳಿಯುವ ಕುತೂಹಲದಿಂದ ನಿಮ್ಮನ್ನು ಕೇಳಿ ಕೊಳ್ಳುತ್ತೇನೆ, ತಿಳಿಸುವಿರಾ?'' ಎಂದು ದೈನ್ಯದಿಂದ ಅಶ್ವಿನೀ ಕುಮಾರ್ ಬೇಡಿಕೊಂಡರು. ''ನಮ್ಮ ಗುರುವರ್ಯರು ಈ ಮೊದಲೇ ಅದನ್ನು ಹೇಳಿದ್ದಾರೆ. ನನಗೆ ಅದಕ್ಕಿಂತ ಹೆಚ್ಚೇನೂ ಹೇಳಲಿಕ್ಕಿಲ್ಲ. ನಮ್ಮ ಇರುವಿಕೆಯೇ ಧರ್ಮದ ಮೇಲಿದೆ. ಎಲ್ಲಾ ಸುಧಾರಣೆಗಳೂ ಧರ್ಮಸಮ್ಮತವಾಗಿಯೇ ಇರಬೇಕು ಹಾಗೂ ಜನಪರವಾಗಿರಬೇಕು. ಅದಕ್ಕೆ ವ್ಯತಿರಿಕ್ತವಾದುದು, ಗಂಗಾನದಿ ಯನ್ನು ಹಿಮಾಲಯಕ್ಕೆ ತಿರುಗಿಸಿ ಹರಿಯುವಂತೆ ಮಾಡಲು ಹೇಗೆ ಅಸಾಧ್ಯವೋ ಹಾಗೆಯೇ ಅಸಾಧ್ಯ'' ಎಂದು ಸ್ಪಷ್ಟವಾಗಿ ಸ್ವಾಮೀಜಿ ನುಡಿದರು. ಹಾಗಾದರೆ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ನಿಮಗೆ ನಂಬಿಕೆಯಿಲ್ಲವೇ ಎಂಬ ಪ್ರಶ್ನೆಗೆ, ''ಇಲ್ಲ-ಖಂಡಿತವಾಗಿಯೂ ಇಲ್ಲ. ಕಾಂಗ್ರೆಸ್ ಜನಸಮುದಾಯಕ್ಕಾಗಿ ಏನು ಮಾಡಿದೆ? ಕೇವಲ ಮನವಿಗಳನ್ನು ಸಲ್ಲಿಸುವುದರಿಂದಲೇ ಸ್ವಾತಂತ್ರ್ಯ ಸಿಗು ವುದೆ? ನನಗೆ ಅದರಲ್ಲಿ ನಂಬಿಕೆಯಿಲ್ಲ. ಕಾಂಗ್ರೆಸ್ ಜನರ ಏಳಿಗೆಗಾಗಿ ದುಡಿಯಬೇಕು. ಜನಜಾಗೃತಿಯುಂಟುಮಾಡ ಬೇಕೇ ವಿನಹ ಕೇವಲ ಪ್ರಚಾರಾಡಂಬರಗಳಲ್ಲಿ ಕಾಲಹರಣ ಮಾಡಬಾರದು. ಬಡಜನರ ಹಸಿವು ನಿವಾರಣೆಯಾಗಬೇಕು - ಬಡತನ ದೂರವಾಗಬೇಕು. ಆ ನಿಟ್ಟಿನಲ್ಲಿ ಕಾಂಗ್ರೆಸ್ ಕಾರ್ಯ ಪ್ರವೃತ್ತವಾದರೆ, ಅದಕ್ಕೆ ನನ್ನ ಸಹಾನುಭೂತಿಯಿದೆ'' ಎಂದು ನೇರವಾಗಿ ಉತ್ತರಿಸಿದರು. (ಮುಂದೆ, ಸುಭಾಷ್‌ಚಂದ್ರ ಬೋಸ್ ಅವರೂ ಕಾಂಗ್ರೆಸ್‌ನ 'ಮನವಿ-ಪ್ರಾರ್ಥನೆ'ಯ ಭಿಕ್ಷಾಟನಾ ನೀತಿಯನ್ನು ಬಲವಾಗಿ ಖಂಡಿಸಿದ್ದರು). ''ತಾವು 'ಧರ್ಮ' ಎಂದಿರುವುದು ಯಾವುದಾದರೂ ಮತಕ್ಕೆ ಸಂಬಂಧಿಸಿದೆಯೆ?'' (creed) ಎಂದು ಅಶ್ವಿನೀಕುಮಾರ್ ಕೇಳಿದಾಗ ಸ್ವಾಮೀಜಿ ಯವರು, ''ನಮ್ಮ ಗುರುಗಳು (ಶ್ರೀರಾಮಕೃಷ್ಣ ಪರಮಹಂಸ) ಯಾವುದಾದರೂ ಮತವನ್ನು ಬೋಧಿಸಿದ್ದಾರೆಯೆ? ಅವರು ಸರ್ವವ್ಯಾಪಿಯಾದ ವೇದಾಂತದ ಬಗ್ಗೆಯಷ್ಟೇ ಬೋಧಿಸಿರು ವುದು. ನಾನೂ ಅದನ್ನೇ ಹೇಳುವುದು ಮತ್ತು ನಮ್ಮ ಧರ್ಮದ ಸಾರಾಂಶವೇ 'ಶಕ್ತಿ-ಸಾಮರ್ಥ್ಯ' (Strength is religion, and nothing is greater than strength)'' ಎಂದು 'ಮತ' ಗಳ ಹೊರತಾದ 'ಧರ್ಮ'ದ ಬಗ್ಗೆ ಹೇಳಿದರು. ಆಗ ಅಶ್ವಿನೀ ಕುಮಾರ್, ''ನಾನೇನು ಮಾಡಬೇಕೆಂಬುದನ್ನು ತಿಳಿಸುವಿರಾ'' ಎಂದು ಸ್ವಾಮೀಜಿಯವರ ಸಲಹೆ, ನಿರ್ದೇಶನಕ್ಕಾಗಿ ಬೇಡಿ ಕೊಂಡಾಗ, ಸ್ವಾಮೀಜಿಯವರು, ''ನೀವು ಜ್ಞಾನಪ್ರಸರಣ ಮತ್ತು ವಿದ್ಯಾಭ್ಯಾಸದ ಕಾರ್ಯಗಳಲ್ಲಿ ತೊಡಗಿರುವಿರಿ ಎಂಬು ದನ್ನು ತಿಳಿದಿರುವೆ. ಅದು ಎಲ್ಲರನ್ನೂ ಸುಸಂಸ್ಕೃತರನ್ನಾಗಿ ಮಾಡುವ (man-making education) ವಿದ್ಯಾಭ್ಯಾಸವಾಗ ಬೇಕು. ಯುವಕರ ನೈತಿಕ ಅಧಃಪತನಕ್ಕೆ ಎಡೆ ನೀಡಬಾರದು. ಬಂಗಾಳೀ ಯುವಕರ ಎಲುಬು ಭಾರತೀಯರ ದಾಸ್ಯವನ್ನು ಹೊಡೆದೋಡಿಸುವ ವಜ್ರಾಯುಧವಾಗಬೇಕು. ನೀತಿ-ರಹಿತ ಅಥವಾ ಅನೈತಿಕ ಆಹಾರ-ವಿಹಾರಗಳು, ಸಂಗೀತ-ನೃತ್ಯಗಳು ರಾಷ್ಟ್ರನಿರ್ಮಾಣಕ್ಕೆ ಅಡಚಣೆಗಳಾಗಿ ಯುವಶಕ್ತಿಯನ್ನು ಅಡ್ಡ ದಾರಿಗೆ ಎಳೆಯುವುದನ್ನು ಹತ್ತಿಕ್ಕಲೇಬೇಕು. ಅಸ್ಪೃಶ್ಯರು, ಚಮ್ಮಾರರು, ಜಾಡಮಾಲಿಗಳು ಹಾಗೂ ಅದೇ ರೀತಿಯ ನಿಮ್ನ ವರ್ಗದವರಲ್ಲಿ ಸ್ವಾಭಿಮಾನ ಮತ್ತು ಧೈರ್ಯ ತುಂಬಬೇಕು. ಅವರಲ್ಲಿಯ ಸುಪ್ತ ಶಕ್ತಿಯನ್ನು ಹೊರತೆಗೆದು ಅವರನ್ನು ರಾಷ್ಟ್ರೀಯ ಮುಖ್ಯವಾಹಿನಿಗೆ ತರಬೇಕು. 'ಎದ್ದೇಳಿ, ಜಾಗೃತ ರಾಗಿರಿ, ಗುರಿ ಮುಟ್ಟುವ ತನಕ ವಿಶ್ರಮಿಸದಿರಿ' ಎಂಬ ಉಪನಿ ಷದ್ ಸಂದೇಶವನ್ನು ಪಾಲಿಸುವಂತೆ ಅವರನ್ನು ಹುರಿದುಂಬಿಸ ಬೇಕು. ದಲಿತೋದ್ಧಾರವಾಗದೆ ದೇಶೋದ್ಧಾರವಾಗದು.'' ಎಂಬು ದಾಗಿ ಆ ನಿಟ್ಟಿನಲ್ಲಿ ನಿಸ್ವಾರ್ಥ ಮನೋಭಾವದಿಂದ ಕಾರ್ಯ ಪ್ರವೃತ್ತರಾಗಲು ನಿರ್ದೇಶಿಸಿದರು. ಅದಾಗಿ, ಅಶ್ವಿನೀ ಕುಮಾರ್, ''ಈ ದಿನ ನಿಮ್ಮ ಮೇಲಿನ ನನ್ನ ಭಾವನೆ ಇಮ್ಮಡಿಯಾಯಿತು. ನೀವು ಜಗತ್ತನ್ನೇ ಜಯಿಸಿದವರು ಎಂಬುದೂ ಈಗ ಮನದಟ್ಟಾ ಯಿತು. ನಿಮ್ಮ ಸಲಹೆ-ನಿರ್ದೇಶನಗಳಿಗೆ ಧನ್ಯವಾದಗಳು'' ಎಂದು ಹೇಳಿ ಸ್ವಾಮೀಜಿಯವರ ಅಪ್ಪಣೆ ಪಡೆದು ನಿರ್ಗಮಿಸಿ ದರು.

### ಸ್ವಾಮಿ ವಿವೇಕಾನಂದರ ಪ್ರಭಾಮಂಡಲ

ಸ್ವಾಮಿ ವಿವೇಕಾನಂದರ ಸಂಪರ್ಕಕ್ಕೆ ಬಂದವರೆಲ್ಲರೂ, ಅವರ ದಿವ್ಯಪ್ರಭಾ ಮಂಡಲದಿಂದ ಪ್ರಭಾವಕ್ಕೊಳಗಾಗುವುದು ಸಾಮಾನ್ಯವಾಗಿತ್ತು. ಅದರಿಂದಾಗಿಯೇ ಅನೇಕ ವಿದೇಶೀಯರು ಅವರ ಶಿಷ್ಯರಾಗಿದ್ದರು. ಅಶ್ವಿನೀ ಕುಮಾರ್ ಅವರದು ಕೇವಲ ಒಂದು ಉದಾಹರಣೆಯಷ್ಟೆ. ಆ ಮೊದಲೇ ಸಮಾಜಸೇವೆಯಲ್ಲಿ ನಿರತರಾಗಿದ್ದ ಅಶ್ವಿನೀಕುಮಾರ್ ದತ್ತ ಅವರಿಗೆ ಸ್ವಾಮೀಜಿಯವರ ಭೇಟಿಯಾದ ಮೇಲೆ ಹೊಸ ಸ್ಫೂರ್ತಿ-ನವಚೈತನ್ಯ ತುಂಬಿ 'ಕರ್ಮಯೋಗಿ'ಯಾಗಿ ಸೇವಾಕಾರ್ಯರಂಗಕ್ಕೆ ಧುಮುಕಿದರು. ಅವರ ವಿದ್ಯಾಸಂಸ್ಥೆಗಳಲ್ಲಿ, ಜ್ಞಾನಪ್ರಸರಣದೊಂದಿಗೆ, ನೈತಿಕ ಶಿಕ್ಷಣವನ್ನೂ ನೀಡಿ ಯುವಜನರನ್ನು ಆದರ್ಶ ಪ್ರಜೆಗಳನ್ನಾಗಿ ರೂಪಿಸಿದರು. ಸ್ವಾಮೀಜಿಯವರು ಹೇಳಿದಂತೆಯೇ ದಲಿತೋ ದ್ಧಾರಕ್ಕಾಗಿ ಶ್ರಮಿಸಿದರು. ಸೇವಾರೂಪದಲ್ಲೇ ಜನಾಂದೋಲನ ವನ್ನು ಹಮ್ಮಿಕೊಂಡ ಅವರು ದೀನ-ದಲಿತರ ಏಳಿಗೆಗಾಗಿ ಶ್ರಮಿಸಿದರು. ಬಂಗಾಳದ ಮೂಲೆಮೂಲೆಗೂ ಸಾಗಿ, ರಸ್ತೆ ಸೌಕರ್ಯ ಇಲ್ಲದಲ್ಲಿಗೆ ದೋಣಿ ಮೂಲಕ ಸಾಗಿ ಜನರನ್ನು ಉದ್ದೀಪನಗೊಳಿಸಿದರು. ಅವರು ಸ್ವತಃ ಉತ್ತಮ ಬರಹಗಾರ ರಾಗಿದ್ದು ಸುಮಾರು ಐದು ಕೃತಿಗಳನ್ನು ರಚಿಸಿದ್ದರು. ಅವರ

ಗ್ರಂಥ ‘ಭಕ್ತಿಯೋಗ’ ಆಂಗ್ಲಭಾಷೆಗೂ ಭಾಷಾಂತರವಾಗಿ ಪಾಶ್ಚಾತ್ಯ ವಿಮರ್ಶಕರನ್ನೂ ಆಕರ್ಷಿಸಿತ್ತು.

ಬ್ರಿಟಿಷ್ ಆಡಳಿತ ೧೯೦೫ರಲ್ಲಿ ಬಂಗಾಳದ ವಿಭಜನೆ ಮಾಡಿದಾಗ ಅಶ್ವಿನೀ ಕುಮಾರ್ ರಾಜಕೀಯಾಂಗಣದಲ್ಲಿ ಪ್ರಸಿದ್ಧರಾದರು. ಸ್ವಾಮಿ ವಿವೇಕಾನಂದರು ಪರೋಕ್ಷವಾಗಿ ರಾಷ್ಟ್ರೀಯ ಚಳುವಳಿಗೆ ಪ್ರೇರಣೆ ನೀಡಿದ್ದರು. ಆ ಪ್ರಭಾವ ಅಶ್ವಿನೀಕುಮಾರ್ ಅವರಲ್ಲಿ ಪ್ರತಿಬಿಂಬಿಸಿತ್ತು. ೧೯೦೬ರಲ್ಲಿ ಬಂಗಾಳದ ಪ್ರಾಂತೀಯ ಕಾಂಗ್ರೆಸ್ ಅಧಿವೇಶನದಲ್ಲಿ, ಅಶ್ವಿನೀಕುಮಾರ್ ಮಾಡಿದ ಭಾಷಣ ದೇಶಭಕ್ತರನ್ನು ಬಡಿದೆಬ್ಬಿಸಿತು! ಆ ‘ವಂದೇ ಮಾತರಂ’ ಘೋಷಣೆ ರಾಷ್ಟ್ರ-ಘೋಷಣೆಯಾಗಿ ಮೂಡಿಬಂತು ಮತ್ತು ಬ್ರಿಟಿಷರು ಅದನ್ನು ನಿಷೇಧಿಸಿದರು. ಆದರೆ, ‘ಸ್ವದೇಶೀ ಚಳುವಳಿ’ ಹಾಗೂ ‘ಅಸಹಕಾರ ಚಳುವಳಿ’ಗಳ ಮೂಲಕ ಅಶ್ವಿನೀಕುಮಾರ್ ಬ್ರಿಟಿಷ್ ಆಡಳಿತಕ್ಕೆ ಸವಾಲೆಸೆದರು. ಬ್ರಿಟಿಷ್ ಅಧಿಕಾರಿಯೋರ್ವರು (Hugest Buller) ‘‘ಅಶ್ವಿನೀ ಕುಮಾರ್, ‘ಉರಿ-ಚೆಂಡು’, ಅಪಾಯಕಾರಿ ವ್ಯಕ್ತಿ, ಜಾಗ್ರತೆಯಿರಲಿ’’ ಎಂದು ಢಾಕ್ಕಾ ಕಮಿಷನರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. (೧೭ ಜೂನ್, ೧೯೦೭) ಸ್ವಾತಂತ್ರ್ಯ ಚಳುವಳಿಯ ಹೋರಾಟಕ್ಕಾಗಿ ಅವರು ಜೈಲುವಾಸವನ್ನೂ ಅನುಭವಿಸಿದ್ದರು (೧೯೦೮-೧೦). ಬಂಗಾಳ ಪ್ರಾಕೃತಿಕ ವಿಕೋಪಕ್ಕೆ ಒಳಗಾದಾಗ (೧೯೧೯) ಪರಿಹಾರ ಕಾರ್ಯವನ್ನೂ, ಪ್ಲೇಗ್ ರೋಗಕ್ಕೆ ತುತ್ತಾದಾಗ ಸೇವಾಕಾರ್ಯವನ್ನೂ ಅಶ್ವಿನೀ ಕುಮಾರ್ ಸಂಯೋಜಿಸಿದ್ದರು.

ವಿವಿಧ ಕಾರ್ಯಕ್ಷೇತ್ರಗಳಲ್ಲಿ ಸಂದರ್ಭೋಚಿತವಾದ ಸಲಹೆ – ನಿರ್ದೇಶನಗಳನ್ನು ಲೋಕೋದ್ಧಾರಕ್ಕಾಗಿ ನೀಡುತ್ತಿದ್ದ ಸ್ವಾಮಿ ವಿವೇಕಾನಂದರು ರಾಷ್ಟ್ರೀಯ ಆಂದೋಲನದಲ್ಲಿ ಆಧ್ಯಾತ್ಮಿಕ ಬೆಳಕಿನ ರಾಷ್ಟ್ರೀಯತೆಯ ಸ್ಫೂರ್ತಿ ನೀಡಿದುದು ಅನನ್ಯವಾಗಿತ್ತು. ಸ್ವಾಮೀಜಿಯವರು ‘ಸ್ಫೂರ್ತಿಯ ಚಿಲುಮೆ’ ಆಗಿ ವಿರಾಜಮಾನವಾಗಿದ್ದಾರೆ. ✻



## ಶ್ರೀರಾಮಕೃಷ್ಣರ ಭಾವಚಿತ್ರದ ಕಥೆ

ಸ್ವಾಮಿ ಅಖಂಡಾನಂದರು ಒಂದು ದಿನ ಬೇಲೂರು ಮಠದಲ್ಲಿ ಮಾತುಕತೆಯ ನಡುವೆ ಕೇಳಿದರು, ‘‘ಇತ್ತೀಚೆಗೆ ಪೂಜೆ ಮಾಡಲಾಗುತ್ತಿರುವ ಶ್ರೀರಾಮಕೃಷ್ಣರ ಫೋಟೋ ಬಗ್ಗೆ ನಿಮಗೇನಾದರೂ ಗೊತ್ತೆ ?’’ ನಮಗೇನೂ (ನಿರ್ವಾಣಾನಂದ ಮತ್ತಿತರರಿಗೆ) ಆ ಬಗ್ಗೆ ಹೆಚ್ಚೇನೂ ವಿಷಯ ತಿಳಿದಿಲ್ಲ ಎಂದಾಗ ಅವರು ಈ ಕೆಳಗಿನ ವಿಷಯವನ್ನು ತಿಳಿಸಿದರು:

ಬಾರಾನಗರದ ಭವನಾಥ ಚಟರ್ಜಿ ಗುರುದೇವರ ಫೋಟೋ ತೆಗೆಯಬೇಕೆಂದು ಇದ್ದನು. ಒಂದು ದಿನ ಅವನು ಅದಕ್ಕಾಗಿ ಶ್ರೀರಾಮಕೃಷ್ಣರ ಅನುಮತಿಯನ್ನು ಕೋರಿ ಬಹಳ ಒತ್ತಾಯಿಸಿದನು. ಮರುದಿನ ಮಧ್ಯಾಹ್ನ ಅವನು ತನ್ನೊಂದಿಗೆ ಬಾರಾನಗರದಿಂದ ಒಬ್ಬ ಫೋಟೋಗ್ರಾಫರ್‌ನನ್ನು ಕರೆದುಕೊಂಡು ಬಂದನು. ಆದರೆ ಗುರುದೇವರನ್ನು ಒಪ್ಪಿಸಲು ಅವನಿಗೆ ಸಾಧ್ಯವಾಗಲಿಲ್ಲ. ಗುರುದೇವರು ಹುಸಿಮುನಿಸಿನಿಂದ ರಾಧಾಕಾಂತ ದೇವಸ್ಥಾನಕ್ಕೆ ಹೊರಟುಹೋದರು.

ಅಷ್ಟರಲ್ಲಿ ನರೇಂದ್ರನು ಬಂದನು. ಅವನು ಎಲ್ಲವನ್ನೂ ಕೇಳಿ ತಿಳಿದುಕೊಂಡನು. ಅವನು, ‘‘ಇರು ಸ್ವಲ್ಪ, ನಾನು ಅವರನ್ನು ಒಪ್ಪಿಸುತ್ತೇನೆ’’ ಎಂದನು. ಅವನು ಗುರುದೇವರು ಕುಳಿತಿದ್ದ ರಾಧಾಕಾಂತ ದೇವಸ್ಥಾನದ ಉತ್ತರದ ವರಾಂಡಕ್ಕೆ ಹೋಗಿ ಅವರೊಂದಿಗೆ ಮಾತಿಗಾರಂಭಿಸಿದನು. ಗುರುದೇವರು ಸಮಾಧಿಸ್ಥರಾದರು. ಸ್ವಾಮೀಜಿ ಇತರರನ್ನು ಕರೆದುಕೊಂಡು ಬಂದು ಶೀಘ್ರವಾಗಿ ಫೋಟೋ ತೆಗೆಯುವಂತೆ ಹೇಳಿದರು.

ಸಮಾಧಿಯಲ್ಲಿ ಅವರ ಶರೀರ ಒಂದು ಕಡೆ ಸ್ವಲ್ಪ ಬಾಗಿದೆ ಎಂದು ಫೋಟೋಗ್ರಾಫರ್ ಅವರ ಗಲ್ಲವನ್ನು ಮುಟ್ಟಿ ಅವರನ್ನು ನೇರವಾಗಿ ಕುಳ್ಳಿರಿಸಲು ಹೋದನು. ಆದರೆ ಅವನು ಅವರ ಗಲ್ಲವನ್ನು ಇನ್ನೇನು ಸ್ಪರ್ಶಿಸಿಲ್ಲ, ಅವರ ಇಡೀ ಶರೀರ ಒಂದು ಕಾಗದದ ಹಾಳೆಯಂತೆ ಮೇಲೆ ಬಂದುಬಿಟ್ಟಿತು. ಅವರ ದೇಹ ಅಷ್ಟು ಹಗುರವಾಗಿತ್ತು!

ಸ್ವಾಮೀಜಿ ಅವನಿಗೆ ಹೇಳಿದರು, ‘‘ಏಯ್, ನೀನೇನು ಮಾಡುತ್ತಿರುವೆ? ಬೇಗ ಕ್ಯಾಮರಾ ತಂದು ಫೋಟೋ ತೆಗೆ.’’ ಅವನು ಒಡನೆಯೇ ಫೋಟೋ ತೆಗೆದನು. ಗುರುದೇವರಿಗೆ ಈ ಯಾವ ವಿಷಯವೂ ಗೊತ್ತಾಗಲಿಲ್ಲ.

ಕೆಲವು ದಿನಗಳಾದ ಮೇಲೆ ಭವನಾಥ ಫೋಟೋದ ಪ್ರತಿಯನ್ನು ಗುರುದೇವರಿಗೆ ತಂದು ತೋರಿಸಿದಾಗ ಅವರು ಉದ್ಗರಿಸಿದರು, ‘‘ಇದು ಅತ್ಯುನ್ನತ ಯೋಗಸ್ಥಿತಿಯನ್ನು ಸೂಚಿಸುತ್ತದೆ. ಈ ರೂಪವು ಮುಂದೊಂದು ದಿನ ಪ್ರತಿ ಮನೆಗಳಲ್ಲೂ ಪೂಜಿಸಲ್ಪಡುತ್ತದೆ.’’

*(‘ಶ್ರೀರಾಮಕೃಷ್ಣ ಭಾವಸಂಗಮ’ ಸ್ವಾಮಿ ಚೇತನಾನಂದ, ಪು. ೫೬೯)*